**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**

**ದೇವದುರ್ಗ.**

**ಸಿ.ಸಿ. ನಂ.710/2024**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ದ**

ಆರೋಪಿತರುಃ

1. ಕುಮಾರ @ ರಮೇಶ ತಂದೆ ಹುಲಿಗಪ್ಪ,
ವಯಸ್ಸು: 25 ವರ್ಷಗಳು, ಉಃ ಕೂಲಿ,
ಸಾಃ ಗಾಣದಾಳ, ತಾಃ ದೇವದುರ್ಗ.

**ದೋಷರೋಪಣೆ**

ಶ್ರೀ. ಸುರೇಶ ಅಣ್ಣಪ್ಪ ಸವದಿ., ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆ.ಎಂ. ಎಫ್. ಸಿ ರವರ ನ್ಯಾಯಾಧೀಶರು, ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆ-

ದಿನಾಂಕ 16.07.2024 ರಂದು ಸಂಜೆ 07:00 ಗಂಟೆ ಸಮಯದಲ್ಲಿ ಜಾಲಹಳ್ಳಿ ಪೊಲೀಸ್ ಠಾಣಾ ಸರಹದ್ದು, ದೇವದುರ್ಗ ತಾಲ್ಲೂಕು, ಗಾಣದಾಳ ಗ್ರಾಮದ ಕೆ.ಇ.ಬಿ.ಹತ್ತಿರ ತಾಯಮ್ಮನ ಅಂಗಡಿಯ ಮುಂದಿನ ಎಗ್ ರೈಸ್ ಅಂಗಡಿ ಹತ್ತಿರ ಸಾಕ್ಷಿ-1 ರವರನ್ನು ಕೈಯಿಂದ ದೊಬ್ಬಿ ಭಾರತೀಯ ನ್ಯಾಯ ಸಂಹಿತಾ ಕಲಂ.115(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಕಲ್ಲನ್ನು ತೆಗೆದುಕೊಂಡು ಜೋರಾಗಿ ಬಾಯಿಗೆ ಗುದ್ದಿ ಮುಂದಿನ ಮೇಲ್ಭಾಗದ ಮೂರು ಹಲ್ಲುಗಳನ್ನು ಮುರಿದು ಭಾರಿಸ್ವರೂಪದ ರಕ್ತ ಗಾಯಗಳನ್ನು ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.118(2) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು, ಸಾಕ್ಷಿ-1 ರವರನ್ನು ಲೇ ಸೂಳೆ ಮಗನೆ ನಿನ್ನು ಕೊಂದು ಬಿಡುತ್ತೇನೆ ಲೇ ಅಂತಾ ಅವಾಚ್ಯವಾಗಿ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.352 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಾಕ್ಷಿ-1 ರವರಿಗೆ ಜಗಳ ಬಿಡಿಸಿದ್ದರಿಂದ ನಿನ್ನನ್ನು ಬಿಟ್ಟಿದ್ದೇನೆ ಇಲ್ಲದಿದ್ದರೆ ನಿನ್ನನ್ನು ಜೀವ ಸಹಿತ ಬಿಡುತ್ತಿರಲಿಲ್ಲಾ ಅಂತಾ ಜೀವದ ಬೇದರಿಕೆ ಹಾಕಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.351(2)ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 20.05.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

**ಹಿರಿಯ ಸಿವಿಲ್ ನ್ಯಾಯಾಧಿಶರು ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ,**

**ದೇವದುರ್ಗ.**

**ಸಿ.ಸಿ. ನಂ.710/2024**

ದೂರುದಾರರುಃ ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೋಲಿಸ್ ಠಾಣೆ.

**ವಿರುದ್ದ**

ಆರೋಪಿತರುಃ

1. ಕುಮಾರ @ ರಮೇಶ ತಂದೆ ಹುಲಿಗಪ್ಪ,
ವಯಸ್ಸು: 25 ವರ್ಷಗಳು, ಉಃ ಕೂಲಿ,
ಸಾಃ ಗಾಣದಾಳ, ತಾಃ ದೇವದುರ್ಗ.

**:: <u>ಆಪಾದನೆ</u> ::**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ